# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 130 |
| 2. | ಸದಸ್ಯರ ಹೆಸರು | ಶ್ರೀ ಶಿವಕುಮಾರ್ ಕೆ. |
| 3. | ಉತ್ತರಿಸುವ ದಿನಾಂಕ | 28-01-2026 |
| 4. | ಉತ್ತರಿಸುವವರು | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು |
| **ಕ್ರ. ಸಂ.** | **ಪ್ರಶ್ನೆಗಳು** | **ಉತ್ತರಗಳು** |
| ಅ) | ಕೆ.ಎಸ್.ಐ.ಸಿ ಕೈಗಾರಿಕೆಗಳಲ್ಲಿ ಎಷ್ಟು ವರ್ಷಗಳಿಂದ ರೇಷ್ಮೆ ಸೀರೆ ಉತ್ಪಾದಿಸಲಾಗುತ್ತಿದೆ ಹಾಗೂ ಪ್ರಸ್ತುತ ಎಷ್ಟು ಸಂಖ್ಯೆಯಲ್ಲಿ ಸೀರೆ ಉತ್ಪಾದಿಸಲಾಗುತ್ತಿದೆ: | ಮೈಸೂರು ರೇಷ್ಮೆ ನೇಯ್ಗೆ ಕಾರ್ಖಾನೆಯನ್ನು ಅಂದಿನ ಮೈಸೂರು ಸಂಸ್ಥಾನದ ರಾಜರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು 1912 ರಲ್ಲಿ ಸ್ಥಾಪಿಸಿರುತ್ತಾರೆ.<br><br>ಸಂಸ್ಥೆಯ ವತಿಯಿಂದ ತಿಂಗಳಿಗೆ ಸುಮಾರು 9,000 ಸೀರೆಗಳನ್ನು ಉತ್ಪಾದಿಸಲಾಗುತ್ತಿದೆ. |
| ಆ) | ದೇಶದಲ್ಲಿ ಮತ್ತು ರಾಜ್ಯದಲ್ಲಿ ಎಷ್ಟು ಕೆ.ಎಸ್.ಐ.ಸಿ ಮಳಿಗೆಗಳಿವೆ: ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಸೀರೆಯನ್ನು ಪೂರೈಸಲಾಗುತ್ತಿದೆಯೇ ಮತ್ತು ಉತ್ಪಾದನೆ ಹೆಚ್ಚಿಸುವ ಗುರಿ ಪ್ರಸ್ತಾವನೆಯಲ್ಲಿದೆಯೇ: | ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ ನಿಗಮದ ಮಳಿಗೆಗಳು ಒಟ್ಟು 13 ಮಾರಾಟ ಮಳಿಗೆಗಳು ಕಾರ್ಯನಿರ್ವಹಿಸುತ್ತಿದ್ದು ಮೈಸೂರಿನಲ್ಲಿ 04, ಬೆಂಗಳೂರಿನಲ್ಲಿ 06, ಚನ್ನಪಟ್ಟಣ, ದಾವಣಗೆರೆ ಮತ್ತು ಹೈದರಾಬಾದ್‌ನಲ್ಲಿ ತಲಾ ಒಂದೊಂದು ಮಾರಾಟ ಮಳಿಗೆಗಳು ಕಾರ್ಯನಿರ್ವಹಿಸುತ್ತಲಿವೆ.<br><br>ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಸೀರೆಯನ್ನು ಪೂರೈಸಲು ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.<br><br>ಈ ಸಂಬಂಧ ಈಗಾಗಲೇ ರೇಷ್ಮೆ ನೇಯ್ಗೆ ಕಾರ್ಖಾನೆ-ಮೈಸೂರು ಹಾಗೂ ರೇಷ್ಮೆ ನೇಯ್ಗೆ ಘಟಕ-ಚನ್ನಪಟ್ಟಣ ಇಲ್ಲಿ ಹೆಚ್ಚುವರಿಯಾಗಿ ಜೆಕಾರ್ಡ್ ಮಗ್ಗಗಳನ್ನು ಅಳವಡಿಸಿದ್ದು ಹಾಗೂ ರೇಷ್ಮೆ ನೂಲು ತೆಗೆಯುವ ಘಟಕ-ತಿ.ನರಸೀಪುರ ಇಲ್ಲಿಗೆ ಒಂದು ಸ್ವಯಂಚಾಲಿತ ರೀಲಿಂಗ್ ಯಂತ್ರವನ್ನು ಖರೀದಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು, ಗ್ರಾಹಕರ ಬೇಡಿಕೆಯನುಸಾರ ಉತ್ಪಾದನೆ ಹೆಚ್ಚಿಸುವ ನಿಟ್ಟಿನಲ್ಲಿ ಎಲ್ಲಾ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. |
| ಇ) | ಇತ್ತೀಚಿನ ದಿನಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ದರ ಹೆಚ್ಚಾಗಿದ್ದು, ಇದರ ಪರಿಣಾಮವು ರೇಷ್ಮೆ ಸೀರೆ ಉತ್ಪಾದನೆ ಮೇಲೆ ಬೀರಲಿದೆಯೇ? | ಮೈಸೂರ್ ಸಿಲ್ಕ್ ಶುದ್ಧ ಜರಿ ರೇಷ್ಮೆ ಸೀರೆಗಳಲ್ಲಿ ಚಿನ್ನ ಮತ್ತು ಬೆಳ್ಳಿ ಲೇಪಿತ ಜರಿಯನ್ನು ಉಪಯೋಗಿಸುತ್ತಿದ್ದು, ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ದರಗಳು ಗಣನೀಯವಾಗಿ ಏರಿಕೆಯಾದಂತೆ ಸೀರೆಗಳ ಬೆಲೆ ಪರಿಷ್ಕರಿಸಲಾಗುತ್ತದೆ. ಆದಾಗ್ಯೂ, ಪ್ರಸ್ತುತ ನಿಗಮದ ಸೀರೆಗಳಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ಹಾಗೂ ಇದು ಏಕೈಕ GI TAG ಹೊಂದಿರುವುದರಿಂದ ಬೇಡಿಕೆಯ ಮೇಲೆ ಯಾವುದೇ ಪರಿಣಾಮ ಇರುವುದಿಲ್ಲ. ಹಾಗಾಗಿ ಉತ್ಪಾದನೆಯಲ್ಲಿ ಸಹ ಯಾವುದೇ ಇಳಿಕೆ ಸದ್ಯದಲ್ಲಿ ಇರುವುದಿಲ್ಲ. |

**ಸಂಖ್ಯೆ: ರೇಷ್ಮೆ 27 ರೇಇವಿ 2026**

**(ಕೆ.ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**